1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 01

CW- 01

ಪ್ರ. ಬೋ. ದಿನಾಂಕಃ 18-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಲಕ್ಷ್ಮಿ ಎಸ್ |
| ತಂದೆ/ಗಂಡನ ಹೆಸರು | : | ಕುಮಾರ್ ಕೆ ಜಿ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-12 ನನ್ನ ಗಂಡನ ಅಣ್ಣ. ಚಾಸಾ-13 ರಿಂದ 26 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ಅವರು ನನ್ನ ಗಂಡನ ತಂದೆಯ 2 ನೇ ಹೆಂಡತಿಯ ಮಕ್ಕಳು. ನನ್ನ ಗಂಡ ಪ್ಲೆನಿಂಗ್ ಮಶಿನ್ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಹಲ್ಲೆಗೆ ಒಳಗಾಗಿ ತೀರಿಕೊಂಡಿದ್ದಾರೆ. ಆರೋಪಿಗಳು ನನ್ನ ಗಂಡನಿಗೆ ಹಲ್ಲೆ ಮಾಡಿ ಕೊಲೆ ಮಾಡಿದ್ದಾರೆ.

ದಿ.14-05-2023 ರಂದು ದಾವಣಗೆರೆಗೆ ನನ್ನ ತಮ್ಮನಿಗೆ ಹುಡುಗಿಯನ್ನು ನೋಡಲು ನಾನು, ನನ್ನ ಗಂಡ ಮತ್ತು ಇಬ್ಬರು ಮಕ್ಕಳು ಹರಿಹರದಿಂದ ಬೈಕಿನಲ್ಲಿ ಬಂದಿದ್ದೇವು.

ಆರೋಪಿತರು ಭರಮಪುರದಲ್ಲಿ ವಾಸ ಮಾಡುತ್ತಾರೆ. ನಾನು ನನ್ನ ಗಂಡ ಮತ್ತು ಮಕ್ಕಳು ಹರಿಹರದ ಶುಗರ್ ಫ್ಯಾಕ್ಟರಿ ರಸ್ತೆಯಲ್ಲಿ ವಾಸ ಮಾಡುತ್ತೇವೆ. ನನ್ನ ಗಂಡನ ಹಿರಿಯರಿಗೆ ಸಂಬಂಧಿಸಿದ ಒಂದು ಮನೆ ಇತ್ತು . ಸದರಿ ಮನೆಗೆ ಸಂಬಂಧಿಸಿದಂತೆ ನನ್ನ ಗಂಡ ಮತ್ತು ಅವರ ಇಬ್ಬರು ಸಹೋದರಿಯರು ಹಾಗೂ ಅವರ ಅಕ್ಕ ಸೇರಿ ಹರಿಹರದಲ್ಲಿ ಆರೋಪಿತರ ವಿರುದ್ಧ ಕೇಸು ಸಲ್ಲಿಸಿದ್ದರು.

ನನ್ನ ಗಂಡನ ತಾಯಿಗೆ ಜನಿಸಿದ ನನ್ನ ಗಂಡ, ಆತನ ಸಹೋದರರು ಮತ್ತು ಸಹೋದರಿ ಚನ್ನಾಗಿದ್ದರು, ಆದರೆ ಆಸ್ತಿ ವಿಚಾರದಲ್ಲಿ ಆರೋಪಿಗಳಿಗೂ ಮತ್ತು ನಮ್ಮ ಮಧ್ಯ ಮನಸ್ತಾಪ ಇತ್ತು.

ದಿ.14-05-023 ರಂದು ನಾವು ಹರಿಹರವನ್ನು ಮಧ್ಯಾಹ್ನ 1-00 ಗಂಟೆಗೆ ಬಿಟ್ಟು ದಾವಣಗೆರೆಗೆ ಬಂದಿರುತ್ತೇವೆ. ಹೆಣ್ಣು ನೋಡುವ ಎಲ್ಲಾ ಕಾರ್ಯ ಮುಗಿಸಿಕೊಂಡು ವಾಪಸ್ ರಾತ್ರಿ ದಾವಣಗೆರೆಯಿಂದ ಹರಿಹರಕ್ಕೆ ದೊಡ್ಡಬಾತಿ ಬಸ್ ಸ್ಟ್ಯಾಂಡ್ ರಸ್ತೆ ಮೂಲಕ ಹೊರಟ್ಟಿದ್ದೇವು. ಆರೋಪಿರು ತಮ್ಮ ಬೈಕ್ ನಲ್ಲಿ ದಾವಣಗೆರೆಕಡೆಯಿಂದ ಬರುತ್ತಿದ್ದವರು ನಮ್ಮ ವಾಹನವನ್ನು ಹಿಂದಕ್ಕೆ ಹಾಕಿ ಮುಂದಕ್ಕೆ ಹೋದರು. ಆಗ ನನ್ನ ಗಂಡ ಯಾರೋ ಬಂದರಲ್ಲಾ ಎಂದು ತಿರುಗಿ ನೋಡಿದರು, ಅದಕ್ಕೆ ಆರೋಪಿತರು ಯಾಕೆ ಗುರಾಯಿಸಿ ನೋಡುತ್ತಿಯಾ ಎಂದು ನನ್ನ ಗಂಡನಿಗೆ ಹೇಳಿದರು. ನಾನು ನನ್ನ ಗಂಡನಿಗೆ ಏನೂ ಮಾತನಾಡುವುದು ಬೇಡ, ಸುಮ್ಮನೇ ಹೋಗೋಣ ಎಂದು ಹೇಳಿದೆ. ಅದರಂತೆ ನಾವು ಶುಗರ್ ಫ್ಯಾಕ್ಟರಿ ರಸ್ತೆಯಲ್ಲಿ ನಾವು ಮನೆಗೆ ಹೋಗುತ್ತಿದ್ದಾಗ ರಾತ್ರಿ 10-15 ಗಂಟೆ ಸಮಯದಲ್ಲಿ ಪ್ರಶಾಂತ್ ನಗರದ ಶುಗರ್ ಫ್ಯಾಕ್ಟರಿ ರಸ್ತೆಯ ನಮ್ಮ ಮನೆಯ ಕ್ರಾಸ್ ಬಳಿ ನಾವು ಹೋಗುತ್ತಿದ್ದಾಗ ಆರೋಪಿತರು ನಮ್ಮ ಮನೆಯವರ ಬೈಕ್ ಗೆ ಅಡ್ಡ ಹಾಕಿ , ಕೈ ಮುಷ್ಟಿ ಮಾಡಿ , ನನ್ನ ಗಂಡನಿಗೆ ಯಾಕೆ ಗುರಾಯಿಸ್ತಿಯಾ ಎಂದು ಮುಷ್ಟಿಯಿಂದ ನನ್ನ ಗಂಡನ ಮೈ ಕ್ಕೆ ಗೆ ಹೊಡೆದರು , ಆಗ ಆರೋಪಿ ಮಾರುತಿ ಕಲ್ಲನ್ನು ತೆಗೆದುಕೊಂಡು ನನ್ನ ಗಂಡನ ಹೊಟ್ಟೆಗೆ ಹಾಕಿದ , ಆಗ ಅಕ್ಕಪಕ್ಕದವರು ಮತ್ತು ನನ್ನ ಗಂಡನ ಅಣ್ಣ ಫಕ್ಕಿರಪ್ಪ, ಕುಮಾರ ಮತ್ತು ನಾಗರಾಜ ಸ್ಥಳಕ್ಕೆ ಬಂದು , ಜಗಳವನ್ನು ಬಿಡಿಸಿದರು. ಆ ರೀತಿ ಜಗಳ ಬಿಡಿಸಿದಾಗ ಆರೋಪಿತರು ಅಲ್ಲಿಂದ ಹೊರಟರು.

ಆರೋಪಿತರು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ್ದರಿಂದ ನನ್ನ ಗಂಡ ಮುಖವೆಲ್ಲ ರಕ್ತ ಬಂದು ಬಾವು ಬಂದಿತ್ತು. ಆ ನಂತರ ನನ್ನ ಗಂಡನಿಗೆ ಚಿಕಿತ್ಸೆ ಕೊಡಿಸಲು ನನ್ನ ಮಕ್ಕಳನ್ನು ನಮ್ಮ ಮನೆಯ ಬಳಿ ಬಿಟ್ಟು , ನಾನು, ನನ್ನ ಮಾವ ಫಕ್ಕಿರಪ್ಪ ನನ್ನ ಗಂಡನನ್ನು ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಾವು ಆಸ್ಪತ್ರೆ ತಲುಪಿದಾಗ ರಾತ್ರಿ 10-50 ಗಂಟೆಯಾಗಿತ್ತು. ನಾವು ಸದರಿ ಆಸ್ಪತ್ರೆಗೆ ಪ್ರವೇಶಿಸುವ ಮೊದಲೇ ಆರೋಪಿತರು ತುರ್ತು ಚಿಕಿತ್ಸಾ ವಿಭಾಗದ ವೈದ್ಯರ ಎದುರಿಗೆ ಕುಳಿತಿದ್ದರು. ನಾವು ಹೋಗುತ್ತಿದ್ದಂತೆ ಆರೋಪಿ ಮಾರುತಿ ನನ್ನ ಗಂಡನನ್ನು ಜೋರಾಗಿ ಹಿಡಿದುಕೊಂಡು , ಆರೋಪಿ ರಾಜು ನನ್ನ ಗಂಡನ ಕುತ್ತಿಗೆಗೆ ,ಕೆನ್ನೆಗೆ , ಎಡ ಕಿವಿಯ ಬಳಿ , ಬಲಗಡೆ ಕಣ್ಣಿನ ಬಳಿ ಚುಚ್ಚಿ ಗಾಯಪಡಿಸಿದ . ಆಗ ನನ್ನ ಮಾವ ಫಕ್ಕಿರಪ್ಪ ರವರು ಮಾರುತಿಯಿಂದ ನನ್ನ ಗಂಡನನ್ನು ಬಿಡಿಸಿಕೊಳ್ಳಲು ಬಂದರು. ಆಗ ನನ್ನ ಮನೆಯವರನ್ನು ಬಿಟ್ಟು ಆರೋಪಿ ರಾಜು ನನ್ನ ಮಾವನಿಗೆ ಚಾಕುವಿನಿಂದ ಅವರ

ತುಟಿಗೆ , ಬೆನ್ನಿಗೆ ಚಾಕುವಿನಿಂದ ಹಲ್ಲೆ ಮಾಡಿ ಗಾಯಪಡಿಸಿದ. ನನ್ನ ಗಂಡನಿಗೆ ರಕ್ತ ತುಂಬಾ ಹೋಗಿದ್ದರಿಂದ ಮೂರ್ಛೆ ತಪ್ಪಿ ಕೆಳಗೆ ಬಿದ್ದರು. ಅಲ್ಲೆಲ್ಲ ರಕ್ತವಾಗಿತ್ತು. ನನ್ನ ಗಂಡ ಮೂರ್ಛೆ ತಪ್ಪಿ ಬಿದ್ದಿದ್ದರೂ ಸಹ ನನ್ನ ಗಂಡನ ಮೆಲೆ ಆರೋಪಿ ಮಾರುತಿ ಕುಳಿತು, ಕೂಗಾಡುತ್ತಿದ್ದ. ಅಲ್ಲಿದ್ದ ವೈದ್ಯರು ಮತ್ತು ನರ್ಸ್ ಗಳು ಹೆದರಿ ಹಿಂದಕ್ಕೆ , ಯಾರೂ ಬಿಡಿಸಲು ಬರಲಿಲ್ಲ. ನನ್ನ ಗಂಡನನ್ನು ದಾವಣಗೆರೆ ಸಿಜಿ ಆಸ್ಪತ್ರೆಗೆ ಕಳುಹಿಸಿದರು. ನನ್ನ ಮಾವ ಆರೋಪಿ ರಾಜುವಿನಿಂದ ತಪ್ಪಿಸಿಕೊಂಡು ಹೊರಗಡೆ ಬಂದರು. ಅಷ್ಟೆಲ್ಲ ಆದರೂ ಸಹ ಆರೋಪಿತರು ಅಲ್ಲೇ ಹೊರಗಡೆ ಇದ್ದರು.

ನಂತರ ನಾನು , ನನ್ನ ಮಾವ ಫಕ್ಕಿರಪ್ಪ ಸೇರಿ ನನ್ನ ಗಂಡನನ್ನು ಅಂಬುಲನ್ಸನಲ್ಲಿ ಸಿಜಿ ಆಸ್ಪತ್ರೆಗೆ ಹೋದೆವು. ನಾವು ರಾತ್ರಿ ಆಸ್ಪತ್ರೆಗೆ ಹೋದಾಗ 11-45 ಆಗಿತ್ತು. ವೈದ್ಯರು ನನ್ನ ಗಂಡನನ್ನು ಪರೀಕ್ಷಿಸಿ, ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ನನ್ನ ಗಂಡನ ಶವವನ್ನು ಶವಾಗಾರಕ್ಕೆ ತೆಗೆದುಕೊಂಡು ಹೋದರು.

ದಿ.15-05-2023 ರಂದು ನಾನು ಹರಿಹರ ನಗರ ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಆಸ್ತಿ ವಿಚಾರವಾಗಿ ಆರೋಪಿತರು ಮನಸ್ತಾಪ ಇಟ್ಟುಕೊಂಡು ನನ್ನ ಗಂಡನನ್ನು ಕೊಲೆ ಮಾಡಿದ್ದಾರೆ. ಆ ಬಗ್ಗೆ ನಾನು ಪೊಲೀಸರ ಮುಂದೆ ದೂರು ನೀಡಿದ್ದೇನೆ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ದೂರನ್ನು ನಿಪಿ.1 ಎಂದು , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಅದೇ ದಿನ ರಾತ್ರಿ ಸಿಜಿ ಆಸ್ಪತ್ರೆಯ ಶವಾಗಾರದಲ್ಲಿ ಪೊಲೀಸರು ನನ್ನ ಗಂಡನ ಶವದ ಮೇಲೆ ಶವ ಪಂಚನಾಮೆ ಮಾಡಿದ್ದಾರೆ. ಆ ಸಮಯದಲ್ಲಿ ಭೀಮೇಶ್ , ದೇವಾನಂದ ಮತ್ತು ತಿಪ್ಪೇಶ್ ಎನ್ನುವವರು ಇದ್ದರು. ಸಾಕ್ಷಿ ಶವದ ಒಂದು ಫೋಟೋ ನೋಡಿ ಗುರುತಿಸಿದ್ದು , ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

ಅದೇ ದಿನ ರಾತ್ರಿ ಪೊಲೀಸರು ಹರಿಹರ ಸರ್ಕಾರಿ ಆಸ್ಪತ್ರೆಗೆ ಭೆಟ್ಟಿನೀಡಿ, ನನ್ನನ್ನು ಅಲ್ಲಿಗೆ ಕರೆಸಿದ್ದರು. ನಾನು ಅವರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆ , ಆ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 1-00 ರಿಂದ 2-00 ಗಂಟೆಗ ವರೆಗೆ ಸ್ಥಳ ಪಂಚನಾಮೆ ಮಾಡಿ, ಆಸ್ಪತ್ರೆಯ ಸಿಬ್ಬಂದಿ ನನ್ನ ಗಂಡನ ಚಪ್ಪಲಿಯನ್ನು ಹಾಜರುಪಡಿಸಿದ್ದು ಅದನ್ನು ವಶಪಡಿಸಿಕೊಂಡು ಪಂಚರ ಮತ್ತು ನನ್ನ ಸಹಿ ಪಡೆದರು. ನಂತರ ಕಚ್ಚಾನಕಾಶೆ ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ.

ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ.3 ಎಂದು , ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಚ್ಚಾ ನಕಾಶೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು , ನಕಾಶೆಯನ್ನು ನಿಪಿ.4 ಎಂದು , ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳದಲ್ಲಿ ತೆಗೆಸಿದ ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.5 ಮತ್ತು 6 ಎಂದು ಗುರುತಿಸಲಾಯಿತು. ನನ್ನ ಗಂಡ ಘಟನೆಯ ದಿನ ಧರಿಸಿದ ಚಪ್ಪಲಿಗಳನ್ನು ನೋಡಿದರೆ ಗುರುತಿಸುತ್ತೇನೆ. ಶೀಲ್ ಆಗಿರುವ ಬಟ್ಟೆ ಬ್ಯಾಗ್ ನಿಂದ ಚಪ್ಪಲಿಯನ್ನು ತೆಗೆದು ಸಾಕ್ಷಿಗೆ ತೋರಿಸಲಾಯಿತು. ಸಾಕ್ಷಿ ತನ್ನ ಗಂಡನ ಚಪ್ಪಲಿಗಳನ್ನು ನೋಡಿ ಗುರುತಿಸಿದ್ದು , ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

ಅದಾದ ನಂತರ ದಿ.16-05-2023 ರಂದು ಆರೊಪಿತರು ನನ್ನ ಗಂಡನ ಮೇಲೆ ಹಲ್ಲೆ ಮಾಡಿದ ಸ್ಥಳಕ್ಕ ಪೊಲೀಸರು ನನ್ನನ್ನು ಕರೆಸಿದ್ದರು. ಪೊಲೀಸರಿಗೆ ನಾನು ಸ್ಥಳ ತೋರಿ, ಆರೋಪಿತರು ನನ್ನ ಗಂಡನಿಗೆ ಹೊಡೆಯಲು ಉಪಯೋಗಿಸಿದ ಕಲ್ಲು ಎಂದು ಒಂದು ಕಲ್ಲನ್ನು ತೋರಿಸಿದೆ. ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿ , ಕಲ್ಲನ್ನು ಜಪ್ತಿ ಮಾಡಿದ್ದಾರೆ. ನಂತರ ಕಚ್ಚಾ ನಕಾಶೆ ತಯಾರಿಸಿದ್ದಾರೆ.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ.7 ಎಂದು , ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಶಿಲ್ ಆಗಿರುವ ಬ್ಯಾಗನ್ನು ತೆಗೆದು ಸಾಕ್ಷಿಗೆ ಕಲ್ಲನು ತೊರಿಸಲಾಯಿತು. ಸಾಕ್ಷಿ ಗುರುತಿಸಿದ ಕಲ್ಲನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಕಚ್ಚಾ ನಕಾಶೆಯನ್ನು ನಿಪಿ.8 ಎಂದು , ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಎರಡು ಫೋಟೋಗಳನ್ನು ನಿಪಿ.9 ಮತ್ತು 10 ಎಂದು ಗುರುತಿಸಲಾಯಿತು.

ಆರೋಪಿತರು ಆ ದಿನ ನನ್ನ ಗಂಡನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಶೀಲ್ ಆಗಿರುವ ಮತ್ತೊಂದು ಕವರ್ ತೆಗೆದು ಅದಲರ್ಲಿರುವ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ , ಸಾಕ್ಷಿ ಚಾಕುವನ್ನು ಗುರುತಿಸಿದ್ದು , ಚಾಕುವನ್ನು ಮು.ಮಾ.3 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ನನ್ನ ಗಂಡನ ಮೇಲೆ ಹಲ್ಲೆ ಮಾಡಿ , ಕಲ್ಲು ಮತ್ತು ಚಾಕುವಿನಿಂದ ಹಲ್ಲೆ ಮಾಡಿ , ಚಾಕು ಹಾಕಿ ಕೊಲೆ ಮಾಡಿರುತ್ತಾರೆ.

ನನಗೆ ಇಬ್ಬರು ಮಕ್ಕಳು ಇದ್ದು, ಒಂದು ಗಂಡು ಮಗು , ಇನ್ನೊಂದು ಹೆಣ್ಣು ಮಗ, ಗಂಡು ಮಗನ ಹೆಸರು ಸಮರ್ಥ ಕೆ , ಆತನಿಗೆ 6 ವರ್ಷ , ಮಗಳ ಹೆಸರು ಗೌರಿ. ಕೆ ಅವಳಿಗೆ 3 ವರ್ಷ. ಆ ದಿನ ಆರೋಪಿತರು ಶುಗರ್ ಫ್ಯಾಕ್ಟರಿ ರಸ್ತೆಯಲ್ಲಿ ನಮ್ಮ ಮನೆಯ ಕ್ರಾಸಿನಲ್ಲಿ ನನ್ನ ಗಂಡನ ಮೇಲೆ ಹಲ್ಲೆ ಮಾಡುವ ಸಮಯದಲ್ಲಿ ನನ್ನ ಇಬ್ಬರೂ ಮಕ್ಕಳು ನಮ್ಮ ಜೊತೆಯಲ್ಲಿಯೇ ಇದ್ದರು.

<u>ಪಾಟೀಸವಾಲುಃ</u> ಆರೊಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ

ಶ್ರೀ ವಿ ಎಂ ಎನ್ ವಕೀಲರ ಪರವಾಗಿ ಶ್ರೀ ಎ ಆರ್ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW–1

ಇಂದು ದಿ.10-01-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

<u>ಪಾಟೀಸವಾಲುಃ</u> ಆರೊಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ.

ನಾನು 2 ನೇ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸ್ವಂತ ಊರು ದಾವಣಗೆರೆ. 2015 ರಲ್ಲಿ ನನ್ನ ಮದುವೆಯಾಗಿರುತ್ತದೆ. ನನ್ನ ಮದುವೆಯ ಸಮಯದಲ್ಲಿ ನನ್ನ ಗಂಡ ಕುಮಾರ್ ಮತ್ತು ನನ್ನ ಮಾವ ಫಕ್ಕಿರಪ್ಪ ಕ್ರಿಮಿನಲ್ ಪರಕರಣದಲ್ಲಿ ಹರಿಹರದ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು. ಆ ಕೇಸಿನ ಬಗ್ಗೆನನಗೆ ಗೊತ್ತಿರುವುದಿಲ್ಲ. ನಾನು ಅದನ್ನು ವಿಚಾರಿಸಿರುವುದಿಲ್ಲ. ನನ್ನ ಮಾವ ಫಕ್ಕಿರಪ್ಪ ಜಯಶ್ರೀ ಟಾಕಿಸ್ ಹತ್ತಿರ ಎಗ್ ರೈಸ್ ಅಂಗಡಿ ನಡೆಸುತ್ತಾರೆ ಎನ್ನುವುದು ಸರಿ. ಫಕ್ಕಿರಪ್ಪ ಮಧ್ಯಾಹ್ನ 12-30 ಕ್ಕೆ ಹೋದರೆ ರಾತ್ರಿ

11-30, 12-00 ಗಂಟೆಗೆ ಬರುತ್ತಿದ್ದರು ಎಂದರೆ ಸಾಕ್ಷಿ - ವ್ಯಾಪಾರ ಬೇಗ ಆದರೆ ರಾತ್ರಿ 10-30 ರಷ್ಟು ಹೊತ್ತಿಗೆ ಮನೆಗೆ ಬರುತ್ತಿದ್ದರು. ಎಗ್ ರೈಸ್ ಅಂಗಡಿ ಎದುರು ಭರತ್ ಆಯಿಲ್ ಮಿಲ್ ಕಂಪೌಂಡ್ ಇದೆ ಎಂದರೆ ಸಾಕ್ಷಿ - ನಾನು ಅಷ್ಟಾಗಿ ನೋಡಿಲ್ಲ ಎಂದು ನುಡಿದಿರುತ್ತಾರೆ. ಸದರಿ ಕಂಪೌಂಡ್ ಒಳಗೆ ಸ್ಲಂ ಏರಿಯಾ ಡಿದೆ ಎಂದರೆ ಸಾಕ್ಷಿ - ನಾನು ಅದನ್ನು ನೋಡಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಗಳು ವಾಸ ಮಾಡುತ್ತಿರುವ ಮನೆ ನಿಮ್ಮ ಮಾವ ಸ್ವಂತ ದುಡಿದು ತೆಗೆದುಕೊಂಡ ಮನೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿದ್ದಾರೆ. ನಾನು , ನನ್ನ ಗಂಡ , ಮಾವ ಮತ್ತು ಮಾವನ ಹೆಂಡತಿ ಮಕಳು ವಾಸ ಮಾಡುತ್ತಿರುವ ಪ್ರಶಾಂತ್ ನಗರದ ಮನೆ ನಮ್ಮ ಅತ್ತೆ ಲಕ್ಷ್ಮಮ್ಮ , ನನ್ನ ಗಂಡನ ತಾಯಿಯಿಂದ ಬಂದ ಆಸ್ತಿ ಎಂದರೆ ಸಾಕ್ಷಿ- ಅದು ಇನ್ನು ನಮ್ಮ ಹೆಸರಿಗೆ ಆಗಿಲ್ಲ ಎಂದು ನುಡಿದಿರುತ್ತಾರೆ. ಅದು ನಮ್ಮ ಅತ್ತೆಯವರ ಹೆಸರಿಗೆ ಇರುತ್ತದೆ. ನನ್ನ ಗಂಡ , ಆತನ ಸಹೋದರ ಮತ್ತು ಸೋದರಿಯರು ಸೇರಿ ಆರೋಪಿತರು ವಾಸ ಮಾಡುತ್ತಿರುವ ಮನೆಗೆ ಸಂಬಂಧಿಸಿದಂತೆ ಆರೋಪಿತರ ಮತ್ತು ಅವರ ತಾಯಿಯ ಮೇಲೆ ಪಾಲು ಕೇಳಿ ದಾವೆ ಸಲ್ಲಿಸಿದ್ದರು ಎನ್ನುವುದು ಸರಿ. ಸದರಿ ಕೇಸು ವಜಾ ಆಗಿರುತ್ತದೆ ಎನ್ನುವುದು ಸರಿ. ಸದರಿ ದಾವೆ ವಜಾ ಆಗಿದ್ದನ್ನು ಪ್ರಶ್ನಿಸಿ ಹರಿಹರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಗಡನ ಅಣ್ಣ ಪ್ರಸಾದ್ ಎನ್ನುವವನಿಗೆ ಗಲಾಟೆಯಲ್ಲಿ ತಲೆಗೆ ಪೆಟ್ಟಾಗಿ ಶಿವಮೊಗ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಆತನ ತಲೆಗೆ ಹೊಲಿಗೆ ಹಾಕಿರುವುದರಿಂದ ಈಗಲೂ ಸಹ ಆತ ಚಿಕಿತ್ಸೆ ಪಡೆಯುತ್ತಿದ್ದಾನೆ ಎಂದರೆ ಸಾಕ್ಷಿ - ಗೊತ್ತಿಲ್ಲ ಎಂದು ನುಡಿದಿದ್ದಾರೆ.

ನನ್ನ ತಮ್ಮನಿಗೆ ದಾವಣರೆಗೆಯಲ್ಲಿ ಹೆಣ್ಣು ನೋಡಲು ಹೋದ್ದೇವು. . ಹೆಣ್ಣಿನ ಮನೆಗೆ ಹೋದಾಗ ಸಂಜೆ 4-00 ರಿಂದ 4-30 ಗಂಟೆಯಾಗಿತ್ತು. ಹರಿಹರದಿಂದ ನಮ್ಮ ತಾಯಿಯ ಮನೆಗೆ ಹೋಗಿ ನಂತರ ಹೆಣ್ಣನ್ನು ನೋಡಲು ಸಂಬಂಧಿಕರೆಲ್ಲ ಸೇರಿ ಹೋಗಿದ್ದೇವೆ. ಹೆಣ್ಣು ನೋಡುವ ಕಾರ್ಯ ಮುಗಿಸಿ ಪುನಃ ನಾವು ನಮ್ಮ ತಾಯಿ ಮನೆಗೆ ಹೋಗಿದೆದೇವೆ. ನನ್ನ ಗಂಡ ಕಾರ್ಪೆಂಟರ್ ಕೆಲಸ ಮಾಡುತ್ತಿದ್ದರು. ಸಾಕ್ಷಿಗೆ ಹೆಣ್ಣುನೋಡಿದ ಕೂಡಲೇ ನಿನ್ನ ಗಂಡ ಏನದಾರು ಕೆಲಸ ಇದೆ ಬಾ ಹೋಗಣೋ ಎಂದು ಹೇಳಿದ್ದರಾ ಎಂದರೆ ಸಾಕ್ಷಿ ಇಲ್ಲ, ಹೇಳಿಲ್ಲ ಎಂದು ನುಡಿದಿರುತ್ತಾರೆ. ನಿನ್ನ ಮತ್ತು ನಿನ್ನ ಗಂಡ ಮತ್ತು ನಿನ್ನ ಮಾವ ಫಕ್ಕಿರಪ್ಪ ಮತ್ತು ಆತನ

ಹೆಂಡತಿ ಯ ವೈಯಕ್ತಿಕ ವಿಚಾರ ನಿನ್ನೆ ತವರು ಮನೆಯಲ್ಲಿ ಬಂದಿತ್ತಾ ಎಂದರೆ ಸಾಕ್ಷಿ ಹೆಣ್ಣು ನೋಡಿಕೊಂಡ ವಿಚಾರ ಮಾತ್ರ ಬಂದಿರುತ್ತದೆ ಎಂದು ನುಡಿದಿರುತ್ತಾರೆ.

ನಾವು ದಾವಣಗೆರೆ ಬಿಟ್ಟಾಗ್ಗ ರಾತ್ರಿ 9-15 ರಿಂದ 9-20 ಗಂಟೆಯಾಗಿತ್ತು. ಸಾಕ್ಷಿಗೆ ದಾವಣಗೆರೆಯಿಂದ ಹರಿಹರಕ್ಕೆ ಬರಲು 15 ನಿಮಿಷ ಸಾಕಾಗುತ್ತದೆ ಎಂದರೆ ಸಾಕ್ಷಿ - ಸಾಕಾಗಬಹುದು, ಸ್ಪೀಡಾಗಿ ಓಡಿಸಿದರೆ ಅಷ್ಟು ಬೇಕಾಗುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಆರೋಪಿಗಳೇ ನಿಮ್ಮ ಬೈಕನ್ನು ಹಿಂದಕ್ಕೆ ಹಾಕಿ ಮುಂದಕ್ಕೆಹೋದರು ಎಂದು ಯಾಗ ಗೊತ್ತಾಯಿತು ಎಂದರೆ ಸಾಕ್ಷಿ - ಆರೋಪಿಗಳು ತಮ್ಮ ಬೈಕನ್ನು ನಮ್ಮ ಬೈಕ್ ಬಳಿ ತಂದು ನಮ್ಮನ್ನು ತಿರುಗಿ ನೋಡಿದಾಗ ಯಾಕೋ ನೋಡುತ್ತೀಯಾ ಎಂದು ಹೇಳಿದರು , ಆಗ ಅವರೇ ಎಂದು ಗೊತ್ತಾಗಿರುತ್ತದೆ. ಸಾಕ್ಷಿಗೆ ರಾತ್ರಿಯ ವೇಳೆ ಬೈಕ್ ಗೆ ಹೆಡ್ ಲೈಟ್ ಹಾಕುವುದರಿಂದ ಬೈಕ್ ಓಡಿಸುವವರು ಯಾರು ಎಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ - ಎದುರಿಗೆ ಬಂದ ಸಮಯದಲ್ಲಿ ಗೊತ್ತಾಗುವುದಿಲ್ಲ , ಪಕ್ಕದಲ್ಲಿಹೋಗುವಾಗ ಗೊತ್ತಾಗುತ್ತದೆ ಎಂದು ನುಡಿದಿರುತ್ತಾರೆ. ಯಾಕೇ ನೋಡುತ್ತೀಯಾ ಎಂದು ಕೇಳಿದರು ಎನ್ನುವ ಸಂದರ್ಭದಲ್ಲಿ ಬೈಕು ನಿಧಾನವಾಗಿ ಹೋಗುವ ಸ್ಥಿತಿಯಲ್ಲಿತ್ತು. ಬೈಕನ್ನು ನನ್ನ ಗಂಡನು ನಿಲ್ಲಿಸಿಲ್ಲ , ಆರೋಪಿತರು ಸಹ ನಿಲ್ಲಿಸಿರುವುದಿಲ್ಲ. ಹಾಗೇ ಹೋಗಿರುತ್ತಾರೆ.

ನಾವು ವಾಸವಾಗಿರುವ ಪ್ರಶಾಂತ್ ನಗರದಲ್ಲಿ ಸಾಕಷ್ಟು ಮನೆಗಳು ಇವೆ. ಬಾತಿಯಿಂದ ಶುಗರ್ ಫ್ಯಾಕ್ಟರಿ ರಸ್ತೆ ಮೂಲಕ ಪ್ರಶಾಂತ್ ನಗರಕ್ಕೆ ಬಂದ ರಸ್ತೆ ಜನಮತ್ತು ವಾಹನಗಳು ಓಡಾಡದೇ ಇರುವ ರಸ್ತೆ ಎಂದರೆ ಸಾಕ್ಷಿ -ಬೆಳಗಿನ ಸಮಯದಲ್ಲಿ ಓಡಾಡುತ್ತವೆ. ರಾತ್ರಿಯ ವೇಳೆಯಲ್ಲಿ ಸ್ವಲ್ಪ ಕಡಿಮೆ ವಾಹನಗಳು ಓಡಾಡುತ್ತವೆ ಎಂದು ನುಡಿದಿದ್ದಾರೆ.

ಆರೋಪಿತರು ಬೈಕನ್ನು ಅಡ್ಡ ಹಾಕಿದರು ಎಂದು ಹೇಳುವ ಸಮಯದಲ್ಲಿ ಬೇರೆ ವಾಹನಗಳು ಪ್ರಶಾಂತ್ ನಗರದಲ್ಲಿ ಓಡಾಡುತ್ತಿದ್ದವಾ ಎಂದರೆ ಸಾಕ್ಷಿ ಆ ಸಮಯದಲ್ಲಿ ಓಡಾಡುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಹರಿಹರದ ಶಿವಮೊಗ್ಗ ರಸ್ತೆಯಿಂದ ಹಳೆ ಪಿ ಬಿ ರಸ್ತೆಗೆ ಬರಬೇಕಾದರೆ ಹರಿಹರದ ಸಾರ್ವಜನಿಕ ಆಸ್ಪತ್ರೆಯ ಮುಂಭಾಗದ ರಸ್ತೆಯಲ್ಲಿ ಬಂದು ಪ್ರಶಾಂತ್ ನಗರದ ಚಾನಲ್ ರಸ್ತೆಗೆ ಸೇರಿಕೊಂಡು , ಅಲ್ಲಿಂದ ಹರಿಹರದ ಹಳೆ ಪಿಬಿ ರಸ್ತೆಗೆ ಸೇರುತ್ತದೆ ಎನ್ನುವುದು ಸರಿ. ಅದು ಪ್ರಮುಖ ಔಟರ್ ರಿಂಗ್ ರೋಡ್ ಎನ್ನುವುದು ಸರಿ.

ರಾತ್ರಿ ವೇಳೆಯಲ್ಲಿ ಬೈಕಿ ಮತ್ತು ಕಾರುಗಳು ಆ ರಸ್ತೆಯಲ್ಲಿ ಓಡಾಡುತ್ತವೆ ಎನ್ನುವುದು ಸರಿ.

ಆರೋಪಿಗಳು ನನ್ನ ಗಂಡನಿಗೆ ಮುಷ್ಟಿ ಮಾಡಿ ಹೊಡೆದರು , ಆರೋಪಿ ಮಾರುತಿ ಕಲ್ಲನ್ನು ತೆಗೆದು ಹೊಟ್ಟೆಗೆ ಹಾಕಿದ ಎನ್ನುವ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ - ನಾನು ನನ್ನ ಮಕ್ಕಳು ಇದ್ದೆವು, ಗಲಾಟೆ ಜೋರಾದಾಗ ನನ್ನ ಮಾವ ಫಕ್ಕಿರಪ್ಪ , ಕುಮಾರ್ ಮತ್ತು ನಾಗರಾಜ್ ಎನ್ನುವವರು ಬಂದರು ಎಂದು ನುಡಿದಿರುತ್ತಾರೆ.

ಆ ರೀತಿಯ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿಗೆ ಆ ದಿನ ಮಾರುತಿಯನ್ನು ನಿನ್ನ ಗಂಡನೇ ಕರೆ ಮಾಡಿ ಕರೆಸಿಕೊಂಡಿದ್ದ ಎಂದರೆ ಸಾಕ್ಷಿ - ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿದ್ದಾರೆ.

ಸಾಕ್ಷಿಗೆ ಆ ರೀತಿ ಗಲಾಟೆಯಾಗುವ ಸಮಯದಲ್ಲಿ ನೀನೇನಾದರೂ ಪೊಲೀಸರಿಗೆ ಪೋನ್ ಮಾಡಲು ಪ್ರಯತ್ನ ಪಟ್ಟರಾ ಎಂದರೆ ಸಾಕ್ಷಿ - ನನ್ನ ಕೈಯಲ್ಲಿ ಮಕ್ಕಳು ಇದ್ದವು , ಒಂದು ಮಗು ಮಲಗಿತ್ತು , ಒಬ್ಬ ಮಗ ಕೈ ಹಿಡಿದಿದ್ಧ , ಆದ್ದರಿಂದ ಪ್ರಯತ್ನ ಮಾಡಿಲ್ಲ ಎಂದು ನುಡಿದಿರುತ್ತಾರೆ. ನಿನ್ನ ಮಾವ ಫಕ್ಕಿರಪ್ಪ ಆಗಲಿ , ನಾಗರಾಜ ಆಗಲಿ , ಕುಮಾರ ಆಗಲಿ ಪೊಲೀಸರಿಗೆ ಪೋನ್ ಮಾಡಲು ಪ್ರಯತ್ನಿಸಿದರಾ ಎಂದರೆ ಸಾಕ್ಷಿ - ಗಲಾಟೆಯಾಗಿದ್ದನ್ನು ಬಿಡಿಸಿಕೊಂಡು , ಕರೆದುಕೊಂಡು ಹೋಗಿದ್ದೇವೆ, ಆದ್ದರಿಂದ ಅವರಾರೂ ಪ್ರಯತ್ನ ಮಾಡಿಲ್ಲ ಎಂದು ನುಡಿದಿದ್ದಾರೆ.

ಆಸ್ಪತ್ರೆಗೆ ಹೋಗಲು ನೀವು ಎಷ್ಟು ಗಂಟೆಗೆ ಮನೆ ಬಿಟ್ಟಿರಿ ಎಂದರೆ ಸಾಕ್ಷಿ - ರಾತ್ರಿ 10-45 ರಿಂದ 10-50 ಗಂಟೆಯಾಗಿತ್ತು ಎಂದು ನುಡಿದಿರುತ್ತಾರೆ. ಅಂಬುಲನ್ಸಗೆ ಕರೆ ಮಾಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಾವು ಆ ದಿನ ಆಟೋದಲ್ಲಿ ಕರೆದುಕೊಂಡು ಹೋಗಿದ್ದೇವೆ. ಆಟೋವನ್ನು ಯಾರು ಕರೆಸಿದರು ಎನ್ನುವುದು ಗೊತ್ತಿಲ್ಲ. ಆಟೋ ಚಾಲಕನ ಹೆಸರು ಗೊತ್ತಿರುವುದಿಲ್ಲ. ಸಾಕ್ಷಿಗೆ - ನೀವು ಆಸ್ಪತ್ರೆಗೆ ಹೋಗುವ ಮೊದಲೇ ಆರೋಪಿಗಳು ತುರ್ತು ಚಿಕಿತ್ಸಾ ವಿಭಾಗದ ವೈದ್ಯರ ಎದುರು ಕೂಳಿತಿದ್ದರು ಎಂದು ಹೇಳಿದ್ದೀರಾ , ಯಾವ ಕಾರಣಕ್ಕೆ ಹೋಗಿದ್ದರು ಗೊತ್ತಾ ಎಂದರೆ ಸಾಕ್ಷಿ - ಗೊತ್ತಿಲ್ಲ ಎಂದು ನುಡಿದಿದ್ದಾರೆ .

ದಿ.08-04-2022 ರಂದು ನಿನ್ನ ಗಂಡ ಮತ್ತು ಇತರರು ಸಲ್ಲಿಸಿದ್ದ ದಾವೆ ಮುಕ್ತಾಯವಾಗಿತ್ತು ಎಂದರೆ ಸಾಕ್ಷಿ - ಮುಕ್ತಾಯವಾಗಿದ್ದು ಗೊತ್ತಿರುತ್ತದೆ , ಆದರೆ ಯಾವ

ದಿನಾಂಕದಂದು ಆಗಿದೆ ಎಂದು ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಆಸ್ತಿ ವಿಚಾರವಾಗಿ ಹಾಕಿದ್ದ ಕೇಸು ಆರೋಪಿಗಳ ಪರವಾಗಿ ಆಗಿದ್ದರಿಂದ ಆರೋಪಿಗಳಿಗೆ ನಿಮ್ಮ ವಿರುದ್ಧ ಯಾವುದೇ ದ್ವೇಷ ಇರಲಿಲ್ಲ ಎಂದರೆ ಸಾಕ್ಷಿ ದ್ವೇಷ ಇತ್ತು ಎಂದು ನುಡಿದಿದ್ದಾರೆ.

ಮಧ್ಯರಾತ್ರಿ 2-00 ಗಂಟೆಗೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ನಾನೇ ಬರೆದಿದ್ದೇನೆ , ನಡೆದ ಘಟನೆಯನ್ನೇ ನಾನೇ ಬರೆದಿದ್ದೇನೆ. ಆ ದಿನ ನಾನು, ನನ್ನ ತಮ್ಮ ಲೋಹಿತ್, ನನ್ನ ತಾಯಿಯ ತಮ್ಮ ನಾಗರಾಜ ದೂರು ನೀಡಲು ಹೋಗಿದ್ದೇವು. ಅವರುಗಳು ಹೊರಗಡೆ ಇದ್ದರು, ನಾನು ಠಾಣೆಯ ಒಳಗೆ ಹೋಗಿ ದೂರು ನೀಡಿದ್ದೇನೆ. ಆ ಸಂದರ್ಭದಲ್ಲಿ ಆರೋಪಿತರು ಎಲ್ಲಿ ಇದ್ದರು ಎಂದರೆ ಸಾಕ್ಷಿ- ಎಲ್ಲಿ ಇದ್ದರೋ ಏನೋ ಗೊತ್ತಿಲ್ಲ, ಪೊಲೀಸರು ಕರೆದುಕೊಂಡು ಬಂದರು , ಆಗ ಅವರು ಅಲ್ಲೇ ಇದ್ದರು ಎಂದು ನುಡಿದಿರುತ್ತಾರೆ. ದೂರು ಕೊಟ್ಟ ನಂತರ ಠಾಣೆಯಿಂದ ಮನೆಗೆ ಹೋದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಸಾಕ್ಷಿ - ಬೆಳಗಿನ ಜಾವ 4-00 ರಿಂದ 4-30 ಗಂಟೆಯಾಗಿತ್ತು , ಸೀದಾ ನಮ್ಮ ತಾಯಿ ಮನೆಗೆ ಬಂದಿರುತ್ತೇನೆ. ನಾನು ಸಿಜಿ ಆಸ್ಪತ್ರೆಗೆ ಹೋದಾಗ ಬೆಳಿಗ್ಗೆ 11-00 ಗಂಟೆಯಾಗಿತ್ತು. ನಾನು ಸ್ಥಳಕ್ಕೆ ಹೋದಾಗ ಪೊಲೀಸರಾದ ದೇವಾನಂದ ಮತ್ತು ತಿಪ್ಪೇಸ್ವಾಮಿ ಎನ್ನುವವರು ಇದ್ದರು.

ಶವ ಪಂಚನಾಮೆಯನ್ನು ಲ್ಯಾಪ್ ಟಾಪ್ ನಲ್ಲಿ ತಿಪ್ಪೇಸ್ವಾಮಿ ತೆಗೆದರು , ದೇವಾನಂದ ಹೇಳಿದಂತೆ ಅವರು ಟೈಪ್ ಮಾಡಿದರು , ನಾನು ಅವರಿಗೆ ಎಲ್ಲಾ ವಿಚಾರ ಹೇಳಿರುತ್ತೇನೆ.

ಅದೇ ದಿನ ರಾತ್ರಿ ಪೊಲೀಸರು ಹರಿಹರ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆಸಿದ್ದರು ಎಂದು ಹೇಳಿದ್ದೀರಾ , ಅದು ಎಷ್ಟುಹೊತ್ತಿಗೆ ಎಂದರೆ ಸಾಕ್ಷಿ - ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ.

ಹರಿಹರ ಸಾರ್ವಜನಿಕ ಆಸ್ಪತ್ರೆಗೆ ಸಾಕಷ್ಟು ಜನ ಯಾವಾಗಲೂ ಬಂದು ಹೋಗಿ ಮಾಡುತ್ತಿರುತ್ತಾರೆ ಎನ್ನುವುದು ಸರಿ. ಆಸ್ಪತ್ರೆಯ ಆವರಣದಲ್ಲಿ ಬೀದಿ ನಾಯಿಗಳು ಇರುತ್ತವೆ ಎನ್ನುವುದು ಸರಿ. ಆಸ್ಪತ್ರೆಯ ಆವರಣದಲ್ಲಿ ಪ್ರತ್ಯೇಕವಾದ ಚಪ್ಪಲಿ ಸ್ಟಾಂಡ್ ಇರುವುದಿಲ್ಲ. ಆದರೆ ಚಪ್ಪಲಿ ಬಿಡಲು ಸ್ಥಳವಿರುತ್ತದೆ. ಚಪ್ಪಲಿ ಬಿಡಲು ಆ ರೀತಿಯ ಯಾವುದೇ ಸ್ಥಳ ಇಲ್ಲ , ಇದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮಹಜರ್ ಮಾಡುವ

ಸಮಯದಲ್ಲಿ ಚಪ್ಪಲಿ ಬಿಡುವ ಸ್ಥಳದ ಬಗ್ಗೆ ಮಾಹಿತಿ ಕೊಟ್ಟಿದ್ದಿಯಾ ಎಂದರೆ ಸಾಕ್ಷಿ - ಇಲ್ಲ ಎಂದು ನುಡಿದಿದ್ದಾರೆ. ಮಹಜರ್ ಮಾಡುವ ಸಮಯದಲ್ಲಿ ಪೊಲೀಸರಾದ ಭಿಮೇಶ್ ಮತ್ತು ದೇವಾನಂದ ಬಂದಿದ್ದರು. ತಿಪ್ಪೆಸ್ವಾಮಿ ಸಹ ಬಂದಿದ್ದರು. ಮಹಜರ್ ಬರೆಯಲು ದೇವಾನಂದ್ ರವರು ಮಾಹಿತಿ ಕೊಟ್ಟಿದ್ದಾರೆ. ಮನೆಯ ಬಳಿ ಮಹಜರ್ ಬರೆಯುವಾಗ ಮೇಲ್ಕಂಡ ಪೊಲೀಸರು ಬಂದಿದ್ದರು , ಅದೇ ರೀತಿ ನನ್ನ ಮಾವ ಮಂಜುನಾಥ ಮತ್ತು ನನ್ನ ಗಂಡನ ದೊಡ್ಡಪ್ಪನ ಮಗ ರಾಘವೇಂದ್ರ ಬಂದಿದ್ದರು. ಅವರಿಬ್ಬರೂ ನಮ್ಮ ಸಂಬಂಧಿಕರಾಗಿರುತ್ತಾರೆ. ಸ್ಥಳದಲ್ಲೂ ಸಹ ದೇವಾನಂದ ರವರು ಹೇಳಿ ಮಹಜರ್ ಬರೆಸಿದ್ದಾರೆ.

ನಿಮ್ಮ ಮನೆಯ ಬಳಿ ಗಲಾಟೆಯಾಗಿದೆ ಎಂದು ಹೇಳಿದ ಸ್ಥಳದಿಂದ ನಿಮ್ಮ ಮನೆ ಸುಮಾರು 200 ಮೀಟರ್ ದೂರದಲ್ಲಿ ಇದೆಯೇ ಎಂದರೆ ಸಾಕ್ಷಿ ನಮ್ಮ ಮನೆ ಮೂರು ಮನೆ ಬಿಟ್ಟು ನಾಲ್ಕನೇ ಮನೆಯಾಗಿರುತ್ತದೆ , ಅಂದರೆ ಸುಮಾರು 250 ಅಡಿಗಳಷ್ಟು ದೂರದಲ್ಲಿರುತ್ತದೆ ಎಂದು ನುಡಿದಿರುತ್ತಾರೆ. ನಾವು ವಾಸ ಮಾಡುವ ಮನೆ ಅವಳಿ ಮನೆ ಎನ್ನುವುದು ಸರಿ. ಒಂದು ಮನೆಯಲ್ಲಿ ನಾವು ವಾಸ ಮಾಡುತ್ತೇವೆ. ಮತ್ತೊಂದು ಮನೆಯಲ್ಲಿ ಫಕ್ಕಿರಪ್ಪ ವಾಸ ಮಾಡುತ್ತಾರೆ. ನಮ್ಮ ಮನೆ ಪೂರ್ವ ದಿಕ್ಕಿಗೆ ಮುಖವಾಗಿದೆ. ನಮ್ಮ ಮನೆಯ ಉತ್ತರ ದಿಕ್ಕಿಗೆ ಯಲ್ಲಮ್ಮ ಮತ್ತು ರಾಜೀವ ಎನ್ನುವವರು ವಾಸ ಮಾಡುವ ಮನೆ ಇದೆ. ನಮ್ಮ ಮನೆಯ ಮುಂಭಾಗ ನಾಗರಾಜ್ ಮತ್ತು ಚನ್ನಬಸಪ್ಪ ಎನ್ನುವವರು ದನ ಕಟ್ಟಿಕೊಂಡಿದ್ದಾರೆ. ಅವರು ಸ್ವಲ್ಪ ದೂರದಲ್ಲಿ ವಾಸ ಮಾಡುತ್ತಾರೆ. ನಮ್ಮ ಮನೆಯ ಮುಂಭಾಗದಲ್ಲಿರುವ ದನ ಕಟ್ಟುವ ಉತ್ತರ ದಿಕ್ಕಿಗೆ ಅಬ್ದುಲ್ ನಾಸಿರ್ ವಾಸವಾಗಿದ್ದಾರೆ. ಅವರ ಮನೆಯಲ್ಲಿಅವರವರ ಹೆಂಡತಿ ಮಕ್ಕಳು ನಾಲ್ಕು ಜನ ವಾಸ ಮಾಡುತ್ತಾರೆ. ಗಲಾಟೆ ಆಗಿದೆ ಎಂದು ಹೇಳುವ ಸ್ಥಳ ನಾಸಿರ್ ಎನ್ನುವವರ ಮನೆಯ ಮುಂಭಾಗದಲ್ಲಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದಾರೆ. ಮೇಲ್ಕಂಡ ಅಕ್ಕಪಕ್ಕದ ಮನೆಯವರು ಗಲಾಟೆ ಬಿಡಿಸಲು ಪ್ರಯತ್ನಿಸಿದ್ದಾರಾ ಎಂದರೆ ಸಾಕ್ಷಿ - ಅವರೆಲ್ಲ ಮನೆಯ ಒಳಗಡೆ ಇದ್ದರು ,ಯಾರೂ ಬಿಡಿಸಲು ಬಂದಿಲ್ಲ ಎಂದು ನುಡಿದಿರುತ್ತಾರೆ.

ಆರೋಪಿತರು ಚಾಕುವಿನಿಂದ ಚುಚ್ಚಿ ಸಾಯಿಸಿದ್ದಾರೆ ಎಂದು ಹೇಳಿದ್ದೀರಾ , ಆ ಚಾಕುವನ್ನು ಎಲ್ಲಿಂದ ತಂದರು ಎಂದು ನಿಮಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ , ಮಾಹಿತಿ ಇಲ್ಲ , ಆದರೆ ಅವರ ಬಳಿ ಚಕು ಇತ್ತು ಎಂದು ನುಡಿದಿದ್ದಾರೆ. ಸಾಕ್ಷಿಗೆ ಆ ರೀತಿ ಹೇಳುವ

ಚಾಕು ಆರೋಪಿತರ ಬಳಿ ಇರಲ್ಲಿ, ನಿಮ್ಮ ಮಾವ ಫಕ್ಕಿರಪ್ಪ ತಂದಿದ್ದ ಚಾಕು ಎಂದರೆ ಸಾಕ್ಷಿ ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿದ್ದಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಿಸಿ.41/2014 ರಲ್ಲಿ ಈ ಸಾಕ್ಷಿಯ ಪರವಾಗಿ ಪ್ರಕರಣ ನಡೆಸಿರುವ ಕಾರಣ ಸದರಿ ವಿಷಯ ಈಗ ಗಮನಕ್ಕೆ ಬಂದಿದ್ದ ಕಾರಣ ಈ ಪ್ರಕರಣದಲ್ಲಿ ಮುಂದುವರೆಯುವುದಿಲ್ಲ ಎಂದು ಮೇಮೋ ಸಲ್ಲಿಸಿರುತ್ತಾರೆ. ಆ ಕಾರಣದಿಂದ ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

ಆರೋಪಿಗಳಿಗೆ ಬೇರೆ ವಕೀಲರನ್ನು ನೇಮಿಸಿಕೊಳ್ಳಲು ಸೂಚಿಸಿ , ಪ್ರಕರಣವನ್ನು ಮುದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-1

ಇಂದು ದಿ.19-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

ಪಾಟೀಸವಾಲುಃ ಆರೋಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ

ಆರೋಪಿತರ ಪರ ವಕೀಲರನ್ನು ಕರೆಸಲಾಗಿ ಗೈರುಹಾಜರು, ಕಾರಣ ಮುಂದುವರೆದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.98/2023</u>

PW- 03

CW- 13

ಪ್ರ. ಬೋ. ದಿನಾಂಕಃ 19-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಬಸವರಾಜ್ |
| ತಂದೆ/ಗಂಡನ ಹೆಸರು | : | ಗೋಣೆಬಸಪ್ಪ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಗ್ರೂಪ್-ಡಿ ನೌಕರ , ಹರಿಹರ ತಾಲ್ಲೂಕು ಆಸ್ಪತ್ರೆ |
| ವಾಸ | : | ಕೊಂಡಜ್ಜಿ |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ಕಳೆದ ನಾಲ್ಕು ವರ್ಷಗಳಿಂದ ಹರಿಹರದ ತಾಲ್ಲೂಕು ಆಸ್ಪತ್ರೆಯಲ್ಲಿ ಡಿ-ಗ್ರೂಪ್ ನೌಕರನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ಚಾಸಾ-16 ರಿಂದ 24 ರವರೆಗೆ ನನಗೆ ಗೊತ್ತು. ಅವರೆಲ್ಲರೂ ನಮ್ಮ ಆಸ್ಪತ್ರೆಯಲ್ಲಿ ಕೆಲಸ ಮಾಡತ್ತಾರೆ.

ದಿ.14-05-2023 ರ ರಾತ್ರಿ 10-45 ಗಂಟೆ ಸಮಯದಲ್ಲಿ ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಸಂದರ್ಭದಲ್ಲಿ ಡಾ.ಸವಿತಾ , ಸ್ಟಾಫ್ ನರ್ಸ್- ಶ್ವೇತಾ, ಸುಮಂಗಳಾ ಇತರೆ ಸಿಬ್ಬಂದಿ ಧರಣಿಬಾಯಿ , ವಿರೇಂದ್ರ ಪಾಟೀಲ್ , ಹನಮಿಬಾಯಿ ಎನ್ನುವವರು ಇದ್ದರು. ಆ ಸಮಯದಲ್ಲಿ ಆಸ್ಪತ್ರೆಗೆ ನೀರಿನ ಸರಬರಾಜು ನಿಂತಿತ್ತು. ವೈದ್ಯರಾದ ಡಾ.ಸಾವಿತಾ ರವರು ನೀರು ಸರಬರಾಜು ನಿಂತಿದೆ , ಮೋಟರ್ ಆನ್ ಮಾಡಿ ಎಂದು ನನಗೆ ತಿಳಿಸಿದರು. ಆ ಸಮಯದಲ್ಲಿ ನಮ್ಮ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಒಂದು ಕೊಲೆಯಾಗಿತ್ತು. ಆ ಸ್ಥಳದಲ್ಲೆಲ್ಲ ರಕ್ತ ಬಿದ್ದಿತ್ತು . ವೈದರು ರೋಗಿಗಳು ಬರುತ್ತಿರುತ್ತಾರೆ, ಹಾಗೂ ಇತರೆಯವರು ಸಹ ಬರುತ್ತಿರುತ್ತಾರೆ ಎಂದು ಹೇಳಿ ಆ ಸ್ಥಳ ಸ್ವಚ್ಛ ಮಾಡಲು ತಿಳಿಸಿದರು. ನಾನು ಆ ಸ್ಥಳವನ್ನೆಲ್ಲ ಸ್ವಚ್ಛ ಮಾಡಿದ್ದೇನೆ. ಸ್ವಚ್ಛ ಮಾಡುವಾಗ ಮೃತನ ಒಂದು

ಚಪ್ಪಲಿ ಒಳಗಡೆ ಇತ್ತು , ಒಂದು ಹೊರಗಡೆ ಇತ್ತು. ಆ ಎರಡೂ ಚಪ್ಪಲಿಗಳನ್ನು ಒಂದು ಕಡೆ ಇಟ್ಟಿರುತ್ತೇನೆ.

ರೋಗಿಗೆ ಸಂಬಂಧಿಸಿದ ಗಲಾಟೆ ಹೊರಗಡೆಯಾಗಿತ್ತು. ಅವರು ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದರು, ಅವರ ಹೆಸರು ಕುಮಾರ್ ಎಂದು ಗೊತ್ತಾಯಿತು. ಆ ಸ್ಥಳದಲ್ಲಿ ಸದರಿ ರೋಗಿ ಚೀಟಿ ಮಾಡಿಸಿ , ಚಿಕಿತ್ಸೆಗಾಗಿ ನಿಂತಿದ್ದ ಸಂದರ್ಭದಲ್ಲಿ ಇಬ್ಬರು ವ್ಯಕ್ತಿಗಳು ಬಂದು ಒಬ್ಬ ವ್ಯಕ್ತಿ ಆತನನ್ನು ಹಿಡಿದುಕೊಂಡು , ಇನ್ನೊಬ್ಬ ವ್ಯಕ್ತಿ ಆತನನ್ನು ಚುಚ್ಚಿ ಕೊಲೆಯಾಗಿತ್ತು ಎಂದು ಗೊತ್ತಾಯಿತು. ರೋಗಿ ಜೊತೆ ಬಂದಿದ್ದಂತಹ ವ್ಯಕ್ತಿಗೂ ಸಹ ಚಾಕುವಿನಿಂದ ತುಟಿಯಬಳಿ ಮತ್ತು ಬೆನ್ನಿಗೆ ಚುಚ್ಚಿದ್ದರು ಎಂದು ಗೊತ್ತಾಯಿತು. ರೋಗಿಯನ್ನು ಹಿಡಿದಿದ್ದವನ ಮತ್ತು ರೋಗಿಗೆ ಚಾಕು ಚುಚ್ಚಿದವರ ಹೆಸರು ಗಳು ಗೊತ್ತಾಗಿರುತ್ತದೆ. ಈಗ ಹೇಳಲು ನೆನಪಾಗುತ್ತಿಲ್ಲ. ಆಸ್ತಿ ವಿಚಾರವಾಗಿ ಸದರಿ ಘಟನೆಯಾಗಿರುತ್ತದೆ ಎಂದು ಗೊತ್ತಾಗಿರುತ್ತದೆ.

ದಿ.15-05-2023 ರಂದು ಪೊಲೀಸರು ನಮ್ಮ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಸ್ಥಳಕ್ಕೆ ಬಂದಿದ್ದರು, ಅವರು ಮೃತನ ಚಪ್ಪಲಿಗಳು ಎಲ್ಲಿ ಇವೆ ಎಂದು ಕೇಳಿರು, ನಾನು ಸದರಿ ಚಪ್ಪಲಿಗಳನ್ನು ತಂದು ಪೊಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಆ ಸ್ಥಳದಲ್ಲಿ ಪೊಲೀಸರು ನಕ್ಷೆ ತಯಾರಿಸಿ , ಪಂಚನಾಮೆ ಮಾಡಿ , ಫೋಟೋ ತೆಗೆಸಿ , ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ.

ಸಾಕ್ಷಿ ನಿಪಿ.3 ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.6 ರ ಫೋಟೋ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮು.ಮಾ.1 ಒಂದು ಜೊತೆ ಚಪ್ಪಲಿಗಳನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಪೊಲೀಸರು ನನ್ನನ್ನು ಹರಿಹರ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಘಟನೆಯ ಬಗ್ಗೆ ನ್ಯಾಯಾಧೀಶರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–

ಆ ದಿನ ರೋಗಿಯ ಮೇಲೆ ಹಲ್ಲೆ ಮಾಡಿದವರ ಹೆಸರು ರಾಜು ಮತ್ತು ಮಾರುತಿ

ಎನ್ನುವುದು ಸರಿ.

<u>ಪಾಟೀಸವಾಲುಃ</u> ಆರೋಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ

ವಿದ್ಯುತ ವ್ಯತ್ಯೆಯದಿಂದ ಪಾಟೀಸವಾಲಿಗಾಗಿ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.98/2023

PW- 02

CW- 12

ಪ್ರ. ಬೋ. ದಿನಾಂಕಃ 18-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಫಕ್ಕಿರಪ್ಪ |
| ತಂದೆ/ಗಂಡನ ಹೆಸರು | : | ಗುಡ್ಡಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಪ್ರಶಾಂತ್ ನಗರ , ಶುಗರ್ ಫ್ಯಾಕ್ಟರಿ ರಸ್ತೆ , ಹರಿಹರ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನ್ನ ತಂದೆಗೆ ಇಬ್ಬರು ಹೆಂಡತಿಯರು. ನನ್ನ ತಾಯಿ ಲಕ್ಷ್ಮಮ್ಮ ನನ್ನ ತಂದೆಯ ಮೊದಲನೆ ಹೆಂಡತಿ. ನನ್ನ ತಂದೆಯ 2 ನೇ ಹೆಂಡತಿ ಹೆಸರು ರತ್ನಮ್ಮ. ನನ್ನ ತಾಯಿ ಲಕ್ಷ್ಮಮ್ಮನಿಗೆ ನಾಲ್ಕು ಜನ ಮಕ್ಕಳು. ಅವರೆಂದರೆ ನಾನು, ಪ್ರಸಾದ್ , ಶಾಂತಾ ಮತ್ತು ಕುಮಾರ್ ಆಗಿರುತ್ತೇವೆ. ನನ್ನ ತಂದೆಯ 2 ನೇ ಹೆಂಡತಿ ರತನ್ನಮ್ಮನಿಗೆ ಇಬ್ಬರು ಮಕ್ಕಳು ಅವರೆಂದರೆ ರಾಜಾ ಮತ್ತು ಮಾರುತಿ. ಅವರುಗಳೇ ನ್ಯಾಯಾಲಯದ ಮಂದೆ ಇರುವ ಆರೋಪಿತರಾಗಿರುತ್ತಾರೆ.

ನಾನು ಹರಿಹರದ ಪ್ರಶಾಂತ್ ನಗರದಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ಮೃತ ತಮ್ಮ ಕುಮಾರ್ ಪ್ರಶಾಂತ್ ನಗರದ ನನ್ನ ಮನೆಯ ಪಕ್ಕ ವಾಸ ಮಾಡುತ್ತಿದ್ದ. ಆರೋಪಿತರು ಹರಿಹರ ತಾಲ್ಲೂಕಿನ ಹಳೆಭರಮಪುರದಲ್ಲಿ ವಾಸ ಮಾಡುತ್ತಾರೆ.

ನನ್ನ ತಂದೆಯ ಹೆಸರಿನಲ್ಲಿ ಭರಮಪುರದಲ್ಲಿ ಮನೆ ಇತ್ತು . ಆ ಮನೆಯ ವಿಚಾರವಾಗಿ ನಾನು , ನನ್ನ ಸಹೋದರರು ಮತ್ತು ಸಹೋದರಿ ಸೇರಿ ನನ್ನ ತಂದೆ ಮತ್ತು ನನ್ನ ತಂದೆಯ 2 ನೇ ಹೆಂಡತಿ ಮೇಲೆ ಕೇಸನ್ನು ಹಾಕಿದ್ದೇವು. ಸದರಿ ಮನೆ ನನ್ನ ಚಿಕ್ಕಮ್ಮನ ಅಧೀನದಲ್ಲಿತ್ತು. ಸದರಿ ಮನೆಯಲ್ಲಿ ನನ್ನ ತಂದೆ , ನನ್ನ ತಂದೆಯ 2 ನೇ ಹೆಂಡತಿ ಮತ್ತು ಅವರ ಮಕ್ಕಳಾದ ಆರೋಪಿತರು ವಾಸಮಾಡುತ್ತಿದ್ದರು.

ಆರೋಪಿತರು ಆ ಕೇಸನ್ನು ವಾಪಸ್ ತೆಗೆದುಕೊಳ್ಳಿ , ನಮಗೆ ಇರುವುದು ಒಂದೇ ಮನೆ ಎಂದು ಜಗಳ ಮಾಡುತ್ತಿದ್ದರು, ಆ ರೀತಿ ಎರಡು ಬಾರಿ ಜಗಳ ಆಗಿರುತ್ತದೆ. ಆರೋಪಿತರು ನಾನು ಮಾರುಕಟ್ಟೆಗೆ ಹೋದ ಸಮಯದಲ್ಲಿ ನನ್ನ ಮೇಲೆ ಆ ವಿಚಾರವಾಗಿ ಗಲಾಟೆ ಮಾಡಿದ್ದರು. ಮತ್ತು ಅಂಗಡಿ ಬಳಿ ಆರೋಪಿ ರಾಜು ನನ್ನ ಮೇಲೆ ಗಲಾಟೆ ಮಾಡಿದ್ದ. ಆರೋಪಿತರು ನನ್ನ ತಮ್ಮ ಕುಮಾರ ಹೋಗಿ ಬರುತ್ತಿದ್ದಾಗ ಆಗಾಗ ಗುರಾಯಿಸುತ್ತಿದ್ದರು.

ನನ್ನ ತಮ್ಮ ಕುಮಾರನನ್ನು ಆರೋಪಿತರು ಕೊಲೆ ಮಾಡಿದ್ದಾರೆ. ದಿ.14-05-2023 ರಂದು ಭಾನುವಾರ ರಾತ್ರಿ 10-00 ರಿಂದ 10-15 ಗಂಟೆ ಸಮಯದಲ್ಲಿ ನನ್ನ ತಮ್ಮ ತನ್ನ ಹೆಂಡತಿ ಮಕ್ಕಳ ಜೊತೆ ದಾವಣಗೆರೆಯಿಂದ ಹರಿಹರಕ್ಕೆ ಬೈಕಿನಲ್ಲಿ ಬರುತ್ತಿದಾಗ , ಬಾತಿ ಬಳಿ ಆರೋಪಿತರು ನನ್ನ ತಮ್ಮನ ಬೈಕನ್ನು ಓವರ್ ಟೇಕ್ ಮಾಡಿ , ಆತನಿಗೆ ಗುರಾಯಿಸಿರುತ್ತಾರೆ. ನಂತರ ನನ್ನ ತಮ್ಮ ಪಿಬಿ ರಸ್ತೆಯಲ್ಲಿ ಹೋದರೆ ಗಲಾಟೆ ಮಾಡಬಹುದು ಎಂದು , ನನ್ನ ತಮ್ಮ ಬಾತಿ ಶುಗರ್ ಫ್ಯಾಕ್ಟರಿ ರಸ್ತೆಯಿಂದ ತನ್ನ ಮನೆ ಹತ್ತಿರ ಬರುತ್ತಿದ್ದ.ನನ್ನ ತಮ್ಮ ಬರುವ ಮೊದಲೇ ಆರೋಪಿತರು ನಮ್ಮ ಮನೆಯ ಬಳಿ ನಮ್ಮ ತಮ್ಮನಿಗೆ ಕಾಯುತ್ತಿದ್ದರು. ನನ್ನ ತಮ್ಮ ಪ್ರಶಾಂತ್ ನಗರದ ಶುಗರ್ ಫ್ಯಾಕ್ಟರಿ ರಸ್ತೆಯ ನಮ್ಮ ಮನೆಯಿಂದ 40 ಅಡಿ ದೂರದಲ್ಲಿ ನನ್ನ ತಮ್ಮ ಬಂದಾಗ ಆರೋಪಿತರು ನನ್ನ ತಮ್ಮನನ್ನು ಅಡ್ಡ ಗಟ್ಟಿ ಯಾಕಲೇ ಗುರಾಯಿಸುತ್ತಿ ಎಂದು ಆರೋಪಿ ರಾಜು ನನ್ನ ತಮ್ಮನ ಮೈ ಕೈಗೆ ಮುಷ್ಟಿ ಮಾಡಿ ಹೋಡೆದಿದ್ದಾನೆ. ಆರೋಪಿ ಮಾರುತಿ ನನ್ನ ತಮ್ಮನ ಮೇಲೆ ದೊಡ್ಡ ಕಾಂಕ್ರಿಟ್ ಕಲ್ಲು ಎತ್ತಿ ಹಾಕಿ ದ್ದಾನೆ , ಅದು ನನ್ನ ತಮ್ಮನ ಹೊಟ್ಟೆಗೆ , ಕಾಲಿಗೆ ಬಿದ್ದು ಆತನಿಗೆ ಗಾಯವಾಗಿದ್ದು , ನಾನು ಆ ಸಮಯದಲ್ಲಿ ಮನೆಯ ಬಳಿ ಇದ್ದವನು ಕೂಡಲೇ ಜಗಳ ಬಿಡಿಸಲು ಹೋದೆ. ಅಷ್ಟರಲ್ಲಿ ಕುಮಾರ್ ಡಿ ಮತ್ತು ನಾಗರಾಜ್ ಎನ್ನುವವರು ಅಲ್ಲಿಗೆ ಬಂದರು , ನಾವುಗಳೆಲ್ಲ ಸೇರಿ ಜಗಳ ಬಿಡಿಸಿದ್ದೇವೆ. ಅಲ್ಲಿಂದ ಆರೋಪಿತರು ತಮ್ಮ ಕೆಎ-17-ಹೆಚ್ ಎನ್-0452 ರ ಬೈಕಿನಲ್ಲಿ ಅಲ್ಲಿಂದ ಹೊರಟುಹೋಗಿರುತ್ತಾರೆ.

ನನ್ನ ತಮ್ಮನ ಮುಖವೆಲ್ಲ ಸಂಪೂರ್ಣ ರಕ್ತವಾಗಿದ್ದರಿಂದ ನನ್ನ ತಮ್ಮನ ಮುಖವನ್ನು ನಾನು ನೀರು ಹಾಕಿ ತೊಳೆದೆ. ಹರಿಹರ ಸರ್ಕಾರಿ ಆಸ್ಪತ್ರೆಗೆ ನಾನು , ನನ್ನ ತಮ್ಮ ಮತ್ತು ನನ್ನ ತಮ್ಮನ ಹೆಂಡತಿ ಮೂರು ಜನ ಆಟೋದಲ್ಲಿ ಹೋದೆವು.

ನನ್ನ ತಮ್ಮ ಮತ್ತು ಆತನ ಕುಟುಂಬದವರು ದಾವಣಗೆರೆಗೆ ಕನ್ನೆ ನೋಡುವ

ಕಾರ್ಯಕ್ರಮಗಕ್ಕೆ ಹೋಗಿದ್ದರು

ನಾವು ಸರ್ಕಾರಿ ಆಸ್ಪತ್ರೆಗೆ ಹೋದಾಗ ಆರೋಪಿತರು ಪ್ರಥಮ ಚಿಕಿತ್ಸಾ ಘಟಕದಲ್ಲಿ ಕುಳಿತಿದ್ದರು. ನಾವು ಆಸ್ಪತ್ರೆಗೆ ಹೋದಾಗ ರಾತ್ರಿ ಸುಮಾರು 10-45 ಗಂಟೆಯಾಗಿತ್ತು. ನಾವು ಆಸ್ಪತ್ರೆಗೆ ಹೋದ ತಕ್ಷಣ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದರು. ಆಸ್ಪತ್ರೆಯಲ್ಲಿ ಆಸ್ಪತ್ರೆಯ ಸಿಬ್ಬಂದಿ , ವೈದರು ಮತ್ತು ಸಾರ್ವಜನಿಕರು ಇದ್ದರು. ಆರೋಪಿ ರಾಜು ನನ್ನ ಮೇಲೆ ಹಲ್ಲೆ ಮಾಡಿ ನನ್ನನ್ನು ಕೆಳಗೆ ಬೀಳಿಸಿದ. ಆರೋಪಿ ಮಾರುತಿ ಎನ್ನುವವನು ನನ್ನ ತಮ್ಮನಿಗೆ ಹಿಡಿದುಕೊಂಡ , ಆರೋಪಿ ರಾಜು ಎನ್ನುವವನು ತಾನು ತಂದಿದ್ದ ಚಾಕುವಿನಿಂದ ನನ್ನ ತಮ್ಮನ ಕುತ್ತಿಗೆಗೆ, ಕಪಾಳಕ್ಕೆ , ಕಣ್ಣಿನ ಭಾಗಕ್ಕೆ , ಕಿವಿಗೆ, ಎದೆಗೆ ಚಾಕುವಿನಿಂದ ಚುಚ್ಚಿ ಗಾಯಪಡಿಸಿದ, ಅದರಿಂದ ಆತನ ಮೈ ಎಲ್ಲಾ ರಕ್ತವಾಗಿತ್ತು. ಅದರಿಂದ ನನ್ನ ತಮ್ಮ ಮೂರ್ಛೆ ಬಂದು ಕೆಳಗೆ ಬಿದ್ದ. ನಾನು ಅಷ್ಟರಲ್ಲಿ ಬಿಡಿಸಲು ಹೋದಾಗ ನನ್ನನ್ನು ಮಾರುತಿ ಹಿಡಿದುಕೊಂಡ ಆರೋಪಿ ರಾಜು ಚಾಕುವಿನಿಂದ ನನ್ನ ಬಾಯಿಗೆ , ಕಿವಿಗೆ , ಬೆನ್ನಿಗೆ, ಹೊಟ್ಟೆ ಭಾಗಕ್ಕೆ ಚುಚ್ಚಿದ. ಆಗ ಅಲ್ಲೇ ಇದ್ದ ಸಾರ್ವಜನಿಕರು ಜಗಳ ಬಿಡಿಸಿದ್ದಾರೆ. ಆ ಘಟನೆಯನ್ನು ನೋಡಿ ವೈದರು, ಸಿಬ್ಬಂದಿಗಳು ಎಲ್ಲರೂ ಓಡಿಹೋಗಿದ್ದಾರೆ. ಆರೋಪಿತರು ಒಂದು ಕಡೆ ಹೋಗಿ ನಿಂತುಕೊಂಡರು. ನನ್ನ ತಮ್ಮನನ್ನು ನೋಡಿದಾಗ ಆತನಿಗೆ ಎಚ್ಚರ ಇರಲಿಲ್ಲ. ನಂತರ ನನ್ನ ತಮ್ಮನನ್ನು ಹೆಚ್ಚಿನ ಚಿಕಿತ್ಸೆಗೆಸರ್ಕಾರಿ ಆಸ್ಪತ್ರೆಗೆ ದಾವಣಗೆರೆಗೆ ಅಂಬುಲನ್ಸನಲಿ ಕರೆದುಕೊಂಡು ಬಂದಿದ್ದೇವೆ. ವೈದ್ಯರು ಪರೀಕ್ಷಿಸಿ , ನನ್ನ ತಮ್ಮ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾನೆ ಎಂದು ತಿಳಿಸಿರದು. ನಂತರ ಶವವನ್ನು ಶವಾಗಾರಕ್ಕೆ ತೆಗೆದುಕೊಂಡು ಹೋಗಿ ಹಾಕಿದ್ದೇವೆ. ನಾನು ಚಿಗಟೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಆರೋಪಿತರು ಆಸ್ತಿ ವಿಚಾರವಾಗಿ ನಾವು ಕೇಸು ಮಾಡಿದ್ದರಿಂದ ಅದರ ಹಿನ್ನೆಲೆಯಲ್ಲಿ ನನ್ನ ತಮ್ಮನನ್ನು ಕೊಲ ಮಾಡಿದ್ದಾರೆ , ನನಗೂ ಸಹ ಕೊಲೆ ಮಾಡುವ ಪ್ರಯತ್ನ ಮಾಡಿದ್ದಾರೆ.

ಈ ಬಗ್ಗೆ ಮೃತ ತಮ್ಮನ ಹೆಂಡತಿ ಆರೋಪಿತರ ವಿರುದ್ಧ ದೂರು ನೀಡಿದ್ದಾರೆ. ಆರೋಪಿ ನನಗೆ ಮತ್ತು ನನ್ನ ತಮ್ಮನ ಮೇಲ ಹಲ್ಲೆ ಮಾಡಲು ಉಪಯೋಗಿಸಿದ ಚಾಕು ನ್ಯಾಯಾಲಯದ ಮುಂದೆ ಇರುವ ಮು.ಮಾ.3 ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ನಂತರ ಪೊಲೀಸರು ನನ್ನನ್ನು ಹರಿಹರ ನ್ಯಾಯಾಲಯಕ್ಕೆ ಕರೆದುಕೂಂಡು ಹೋಗಿದ್ದರು. ನಾನು ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ್ದೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು:</u> ಆರೊಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ

ಶ್ರೀ ವಿ ಎಂ ಎನ್ ವಕೀಲರ ಪರವಾಗಿ ಶ್ರೀ ಎ ಆರ್ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-2

ಸಾಕ್ಷಿಯನ್ನು ಇಂದು ದಿ.10-01-2024 ರಂದು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

ಪಾಟೀಸವಾಲು:- ಆರೋಪಿತರ ಪರ ಶ್ರೀ ವಿ ಎಂ ಎನ್ ವಕೀಲರಿಂದ.

ನಾನು 9 ನೇ ತರಗತಿವರೆಗೆ ವಿದ್ಯಾಭಾಸ ಮಾಡಿದ್ದೇನೆ. ನನ್ನ ತಮ್ಮಂದಿರು ನನಗಿಂತ ಕಡಿಮೆ ಓದಿರುತ್ತಾರೆ. ನಿಮ್ಮ ಮನೆತನದ ಎಲ್ಲಾ ವ್ಯವಹಾರಗಳನ್ನು ನೀವೆ ನೋಡಿಕೊಳ್ಳುತ್ತಿದ್ದೀರಾ ಎಂದರೆ ಸಾಕ್ಷಿ - ನನ್ನ ತಾಯಿ ಇರುವವರೆಗೆ ಅವರು ನೋಡಿಕೊಳ್ಳುತ್ತಿದ್ದರು , ಆ ನಂತರ ನಾವು ಮೂರು ಜನ ಅಣ್ಣ ತಮ್ಮದಿರು ಬೇರೆ ಬೇರೆ ವಾಸ ಮಾಡುತ್ತಿದ್ದೇವೆ ಎಂದು ನುಡಿದಿರುತ್ತಾರೆ.

ಭರಮಪುರ ಕೇಸಿನ ಎಲ್ಲಾ ವ್ಯವಹಾರವನ್ನು ಯಾರು ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ -ನಾನು ಮತ್ತು ಕುಮಾರ ಇಬ್ಬು ತೆಗೆದುಕೊಡಿದ್ದೇವು ಎಂದು ನುಡಿದಿರುತ್ತಾರೆ. ಭರಮಪುರ ದ ಆಸ್ತಿ ನನ್ನ ತಂದೆಯ ಆಸ್ತಿ ಎನ್ನುವುದು ಸರಿ. ಪ್ರಶಾಂತ್ ನಗರದ ಆಸ್ತಿ ನನ್ನ ತಾಯಿಯ ಆಸ್ತಿ ಎನ್ನುವುದು ಸರಿ.

ಆರೋಪಿತರು ನನ್ನ ತಂದೆಯ ಚಿಕ್ಕ ಹೆಂಡತಿಯ ಮಕ್ಕಳು ಎನ್ನುವುದು ಸರಿ. ಸಾಕ್ಷಿಗೆ

ಪ್ರಶಾಂತ್ ನಗರದಲ್ಲಿನ ಆಸ್ತಿ ತಾಯಿಯಿಂದ ನಿಮಗೆ ಬಂದಿರುವುದರಿಂದ ಭರಮಪುರ ಆಸ್ತಿ ಆರೋಪಿಗಳಿಗೆ ನಿಮ್ಮ ತಂದೆ ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ಭರಮಪುರ ದಲ್ಲಿರುವ ಆಸಿತಯಲ್ಲಿ ಆರೋಪಿಗಳು ಮತ್ತು ಅವರ ತಾಯಿ ಮೂರು ಜನ ವಾಸ ಮಾಡುತ್ತಿದ್ದದ್ದರಿಂದ ನೀವು ಪಾಲು ಕೇಳಿ ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ - ಅವರು ಕೇವಲ ವಾಸ ಮಾಡುತ್ತಿದ್ದದ್ದರಿಂದ ನಾವು ಕೇಸು ಹಾಕಿಲ್ಲ , ನಮ್ಮ ತಂದೆಯವರು ಪತ್ರ ತಂದು ಕೊಡಲು ಆಗುವುದಿಲ್ಲ , 2 ನೇ ಹೆಂಡತಿಯ ಮಕ್ಕಳು ಕಸಿದು ಇಟ್ಟುಕ್ಕೊಂಡಿದ್ದಾರೆ, ನೀವು ಕೇಸ್ ಮಾಡಿ ತೆಗೆದುಕೊಳ್ಳಿ, ನಾನು ಬಂದು ಸಾಕ್ಷಿ ಹೇಳುತ್ತೇನೆ ನನಗೆ ಅವರು ಹೆದರಿಸುತ್ತಾರೆ , ಹೊಡೆಯುತಾತರೆ ಎಂದು ಹೇಳಿದ್ದರಿಂದ ಕೇಸು ಹಾಕಿದ್ದೇವು ಎಂದು ನುಡಿದಿದ್ದಾರೆ. ಸದರಿ ದಾವಾ ನಂಬರ್ 87/19 ಆಗಿರುತ್ತದೆ ಎನ್ನುವುದು ಸರಿ. ಮೇಲೆ ಹೇಳಿದಂತೆ ದಾವಾ ನಂ.87/19 ರಲ್ಲಿ ಹೇಳಿ ಬರೆಸಿದ್ದಿಯಾ ಎಂದರೆ ಸಾಕ್ಷಿ - ಬರೆಸಿಲ್ಲ ಎಂದು ನುಡಿದಿದ್ದಾರೆ. ಸಾಕ್ಷಿ ಆ ರೀತಿ ಹೇಳಿದರೆ ನನ್ನ ತಂದೆಗೆ ಹಿಂಸೆ ಮಾಡುತ್ತಾರೆ ಎಂದು ಹೇಳಿ ಬರೆಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಹೆದರಿಸುತ್ತಾರೆ , ಹೊಡೆಯತ್ತಾರೆ ಎನ್ನುವ ಬಗ್ಗೆ ನೀವಾಗಲಿ ನಿಮ್ಮ ತಂದೆಯಾಗಲಿ ದೂರು ಕೊಡಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ - ನಾವು ಕೊಡಲು ಪ್ರಯತ್ನಪಟ್ಟೆವು , ಅದಕ್ಕೆ ನನ್ನ ತಂದೆ ಬೇಡಪ್ಪ ಅವರು ಸರಿಯಿಲ್ಲ ಎಂದು ತಡೆದಿದ್ದಾರೆ ಎಂದು ನುಡಿದಿರುತ್ತಾರೆ. ನಿಮ್ಮ ತಂದೆಯವರು ಈ ರೀತಿ ಏನಾದರೂ ಮಾಡುತ್ತಾರೆ , ಕೇಸು ಹಾಕಬೇಡ ಎಂದು ಹೇಳಿದ್ದರಾ ಎಂದರೆ ಸಾಕ್ಷಿ ಆ ರೀತಿ ಹೇಳಿಲ್ಲ , ಆದರೆ ಕೇಸು ಹಾಕು ಎಂದು ಅವರೇ ಹೇಳಿದ್ದರು ಎಂದು ನುಡಿದಿರುತ್ತಾರೆ. ನಿಮ್ಮ ಭರಮಪುರದ ಆಸ್ತಿ ನಿಮ್ಮ ತಂದೆಯ ಸ್ವಂತ ಆಸ್ತಿಯಾಗಿದ್ದರಿಂದ ಅವರು ಸ್ವತಹ ಆರೋಪಿಗಳಿಗೆ ಅವರ ತಾಯಿಗೆ ಬಿಟ್ಟು ಕೊಟ್ಟಿದ್ದರು ಎಂದರೆ ಸಾಕ್ಷಿ - ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿದ್ದಾರೆ. ಆ ರೀತಿ ಹೇಳಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ದಾವೆ ಸಲಿಲಸಿದ್ದೀರಾ ಎಂದರೆ ಸರಿಯಲ್ಲ. ಆ ದಾವೆ ವಜಾ ಆಗಿದೆ ಎನ್ನುವುದು ಸರಿ.

ನೀವು ಮತ್ತು ನಿಮ್ಮ ತಮ್ಮ ಮತ್ತು ನಿಮ್ಮ ಸಹೋದರರು 5 ನೇ ಮುಖ್ಯ ರಸ್ತೆಯಲ್ಲಿರುವ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ - ವಾಸ ಮಾಡುತ್ತಿದ್ದೇವು, ಪ್ರಶಾಂತ್ ನಗರದಲ್ಲಿ 2020 ನೇ ಇಸ್ವಿಗೆ ಹೊಸ ಮನೆ ಕಟ್ಟಿಕೊಂಡು ವಾಸವಾಗಿದ್ದೇವೆ.

ಹರಿಹರದ ನ್ಯಾಯಾಲಯದಲ್ಲಿ 2014 ರಲ್ಲಿ ನಿಮ್ಮ ಮೇಲೆ ಸಿಸಿ.41/2014 ಕೇಸು ಆಗಿತ್ತು ಎಂದರೆ - ಸಾಕ್ಷಿ ವೀರಣ್ಣ ಮತ್ತು ಅವರ ಹೆಂಡತಿ ಮಕ್ಕಳಿಗೆ ಹೊಡೆದಿದ್ದೀರಾ ಎಂದರೆ ಸಾಕ್ಷಿ -ನಮ್ಮದು ಮತ್ತು ಅಕ್ಕಪಕ್ಕದ ಮನೆ , ಮಕ್ಕಳ ವಿಚಾರವಾಗಿ ದೊಡ್ಡವರ ಜಗಳ ಆಗಿತ್ತು , ಕೇಸು ದಾಖಲಾಗಿ ವಜಾ ಆಗಿತ್ತು ಎನ್ನುವುದು ಸರಿ. ಕೇಸು ರಾಜಿಯಿಂದ ವಜಾ ಆಗಿತ್ತು ಎಂದರೆ ನೀವೆ ನಮ್ಮ ಪರವಾಗಿ ರಾಜಿ ಮಾಡಿದ್ದೀರಾ ಎಂದು ಸಾಕ್ಷಿ ನುಡಿದಿರುತ್ತಾರೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಸಿಸಿ.41/2014 ರಲ್ಲಿ ಈ ಸಾಕ್ಷಿಯ ಪರವಾಗಿ ಪ್ರಕರಣ ನಡೆಸಿರುವ ಕಾರಣ ಸದರಿ ವಿಷಯ ಈಗ ಗಮನಕ್ಕೆ ಬಂದಿದ್ದ ಕಾರಣ ಈ ಪ್ರಕರಣದಲ್ಲಿ ಮುಂದುವರೆಯುವುದಿಲ್ಲ ಎಂದು ಮೇಮೋ ಸಲ್ಲಿಸಿರುತ್ತಾರೆ. ಆ ಕಾರಣದಿಂದ ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

ಆರೋಪಿಗಳಿಗೆ ಬೇರೆ ವಕೀಲರನ್ನು ನೇಮಿಸಿಕೊಳ್ಳಲು ಸೂಚಿಸಿ , ಪ್ರಕರಣವನ್ನು ಮುದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-2

ಇಂದು ದಿ.20-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

<u>ಪಾಟೀಸವಾಲುಃ</u> ಆರೊಪಿತರ ಪರ ಶ್ರೀ ಪಿ ಬಿ ವಕೀಲರಿಂದ

ಆರೋಪಿತರಪರ ವಕೀಲರನ್ನು ಕರೆಸಲಾಗಿ ಗೈರುಹಾಜರು, ಕಾರಣ ಮುಂದುವರೆದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.